# ಸೀರಿಯಲ್‌ಗೆ ವಿಲನ್ ಅನಗತ್ಯ



**ನಂದಿನಿ ನಂಜಪ್ಪ**
ಕಲರ್ಸ್ ಕನ್ನಡ 'ಭೂಮಿತಾಯಾಣೆ' ಲೇಖಕಿ

◆ **ಟೀವಿ ಮತ್ತು ಸಿನಿಮಾ ಬರವಣಿಗೆ ಹೇಗೆ ಶುರುವಾಯಿತು?**

ಜವಾಹರಲಾಲ್ ನೆಹರು ಅಡ್ವಾನ್ಸ್ ಸೈಂಟಿಫಿಕ್ ರಿಸರ್ಚ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೆ. ಸಮಯ ಸಿಕ್ಕಾಗ ಏನಾದರೂ ಬರೆಯುತ್ತಿದ್ದೆ. ಕಾಮಿಡಿ ಪ್ರಜ್ಞೆ ನನಗಿತ್ತು. ಮಾತಿನಲ್ಲಿ ಪ್ರಾಸ ತ್ರಾಸಾಗದಂತೆ ಬಳಸುತ್ತಿದ್ದೆ. ಸ್ನೇಹಿತರು ತಮಾಷೆ ಮಾಡ್ತಾ ಇದ್ರು. ಆ್ಯಂಕರ್ ಆಗು ಎಂದು ಅವರು ಹುರಿದುಂಬಿಸುತ್ತಿದ್ದರು. ಕಾಲೇಜು ಮ್ಯಾಗಜಿನ್‌ಗೆ ಏನನ್ನೂ ಬರೆದವಳಲ್ಲ. ಕೆಲಸ ಆರಂಭಿಸಿದ ಮೇಲೆ ಒಂದು ದಿನ ಗಡಿಯಾರದ ಬಗ್ಗೆ ಕವಿತೆ ಬರೆದು ನನ್ನ ಪಕ್ಕದಲ್ಲಿ ಕುಳಿತಿದ್ದ ಅನಂತ ಸಿಂಗನಮಲ್ಲಿ ಎಂಬುವರಿಗೆ ತೋರಿಸಿದೆ. ಅವರು ಚೆನ್ನಾಗಿದೆ ಬರಿ ಎಂದು ಪ್ರೋತ್ಸಾಹಿಸಿದರು. 2014 ಫೇಸ್‌ಬುಕ್ ಅಕೌಂಟ್ ತೆರೆದು ಬರೆಯಲು ಪ್ರಾರಂಭಿಸಿದೆ. ಕನ್ನಡ 3ಕೆ ಗ್ರೂಪ್ ಇತ್ತು. ಅಲ್ಲೂ ಬರವಣಿಗೆಯನ್ನು ಹಾಕುತ್ತಿದ್ದೆ. ಅದೇ ಹೊತ್ತಿಗೆ ಝೀ ಕನ್ನಡದ 'ಡ್ರಾಮಾ ಜೂನಿಯರ್' ಮೊದಲ ಸೀಜನ್‌ಗೆ ಅವಕಾಶ ಸಿಕ್ಕಿತು. ಫೇಸ್‌ಬುಕ್‌ಅನ್ನು ಯಾರು ಯಾವುದಕ್ಕೆ ಬಳಸುತ್ತಾರೋ ಗೊತ್ತಿಲ್ಲ. ಅದರಿಂದ ನನಗೆ ತುಂಬ ಉಪಯೋಗವಾಗಿದೆ. ಕಿರುತೆರೆ–ಬೆಳ್ಳಿತೆರೆಯಲ್ಲಿ ಯಾರ ಪರಿಚಯವೂ ಇರಲಿಲ್ಲ. ಸಿಕ್ಕ ಅವಕಾಶಗಳೆಲ್ಲವೂ ಫೇಸ್‌ಬುಕ್ ಮೂಲವೇ. ಈಗ ಪುರಸೊತ್ತು ಇಲ್ಲದಷ್ಟು ಬರವಣಿಗೆ ಮಾಡುತ್ತಿದ್ದೇನೆ. ಎಫ್‌ಬಿನಲ್ಲಿ ನಾಲ್ಕು ಜನ ನನ್ನ ಬರಹ ಓದಿದರು. ಸಿನಿಮಾ– ಟೀವಿಗೆ ಅವಕಾಶಗಳು ಬಂದವು. ಸಿನಿಮಾದಲ್ಲಿ ಸಂಭಾವನೆಯ ಖಚಿತತೆ ಇಲ್ಲ. ಹಾಗಾಗಿ ಧಾರಾವಾಹಿಗೆ ಮರಳಿದ್ದೇನೆ. ನನಗೆ ಹಾಡು ಬರೆಯಬೇಕು ಎನ್ನುವುದು ಪ್ಯಾಶನ್. 'ಹುಲಿರಾಯ' 'ನಾತಿಚರಾಮಿ' ಸಿನಿಮಾಗಳಿಗೆ ಬರೆದಿದ್ದೇನೆ.

◆ **ಈಗ ಯಾವ ಯಾವ ಧಾರಾವಾಹಿಗಳಿಗೆ ಬರೀತಾ ಇದ್ದೀರಿ?**

ಕಲರ್ಸ್ ಸೂಪರ್, ಕಲರ್ಸ್ ಕನ್ನಡ, ಸ್ಟಾರ್‌ಸುವರ್ಣದ ಧಾರಾವಾಹಿಗಳಿಗೆ ಕೆಲಸ ಮಾಡುತ್ತಿದ್ದೇನೆ. 'ಮಿಥುನ ರಾಶಿ' 'ಮಾಂಗಲ್ಯಂ ತಂತು ನಾನೇನಾ' 'ಭೂಮಿತಾಯಾಣೆ' 'ಇಂತಿ ನಿನ್ನ ಆಶಾ'ಕ್ಕೆ ಚಿತ್ರಕಥೆ– ಡೈಲಾಗ್ ಬರೀತಿದ್ದೇನೆ. ನನ್ನ ಮೊದಲ ಧಾರಾವಾಹಿ 'ಸತ್ಯಂಶಿವಂ ಸುಂದರಂ' ಬರವಣಿಗೆಯಲ್ಲಿ ಇಷ್ಟೆಲ್ಲ ಅವಕಾಶಗಳು ಇವೆ ಎನ್ನುವುದು ಗೊತ್ತಿರಲಿಲ್ಲ. ಸಾಹಿತಿ ಆಗಬೇಕು ಎನ್ನುವ ಕಲ್ಪನೆ ಕೂಡ ಇರಲಿಲ್ಲ. ಫೇಸ್‌ಬುಕ್ ಮೂಲಕ ಬಂದ ಅವಕಾಶಗಳನ್ನು ಸದುಪಯೋಗ ಮಾಡಿಕೊಂಡೆ ಅಷ್ಟೆ. ನಮ್ಮ ಕುಟುಂಬಿಕ ಆರ್ಥಿಕ ಪರಿಸ್ಥಿತಿ ಕೂಡ ತೀರ ಹೇಳುವಂತಹದ್ದಲ್ಲ. ಕೆಲಸ ಬಿಟ್ಟು ಇದಕ್ಕೆ ಬಂದಿದ್ದೇನೆ. ಸೀರಿಯಲ್ ಬರವಣಿಗೆ ನನ್ನ ಅಗತ್ಯಕ್ಕೆ ಅನುಕೂಲಕರವಾಗಿದೆ. ಮುಂದೆ ಹಾಡುಗಳನ್ನು ಬರೆಯುವ ಕನಸು ಇದ್ದೇ ಇದೆ.

◆ **ಚೌಕಟ್ಟಿನ ಬರವಣಿಗೆ ಎಷ್ಟು ಹಿತ– ಅಹಿತ ಅನ್ನಿಸುತ್ತದೆ?**

ಚೌಕಟ್ಟಿನ ಬರಹದಲ್ಲಿ ಅಹಿತವೇ ಜಾಸ್ತಿ. ಕವನಗಳಲ್ಲಿ ಭಾವನೆ ಇರುತ್ತದೆ. ಸೀರಿಯಲ್‌ಗೆ ಚೌಕಟ್ಟು ಹಾಕಿಕೊಟ್ಟಿರುತ್ತಾರೆ. ನೋಡುಗರ ಅಭಿರುಚಿಗೆ ಅನುಗುಣವಾಗಿ ಆ ಚೌಕಟ್ಟು ರೂಪಿತವಾಗಿರುತ್ತದೆ. ಆ ಅಗತ್ಯವನ್ನು ಅರಿತು ಬರೀಯಬೇಕಾಗುತ್ತದೆ. ನಮಗೆ ಏನೂ ಬೇಕೋ ಅದನ್ನು ಬರೆಯುವುದಕ್ಕಿಂತ ಅವರಿಗೆ ಏನೂ ಬೇಕೋ ಅದನ್ನೇ ಬರೆಯಬೇಕು. ಹಾಗೆಂದು ಅವರ ಇಷ್ಟ ಅನಿಷ್ಟ ಎನ್ನುವುದು ಮನವರಿಕೆಯಾದರೆ ಹೇಳಿದ್ದೆಲ್ಲಾ ಬರೆಯಬೇಕು ಎಂದೇನೂ ಇಲ್ಲ. ಬೇಕು ಬೇಡ ಎನ್ನುವುದಕ್ಕೆ ಲೇಖಕರಾದ ನಮ್ಮಲ್ಲಿ ಕಾರಣಗಳು ಇರಬೇಕು. ಅಂತಹ ಬರಹದ ಅಪಾಯವನ್ನು ತಿಳಿಸಿ ಭರವಸೆಯನ್ನು ನೀಡಬೇಕು. ಅದರಿಂದ ಏನಾದರೂ ನಷ್ಟವಾದರೆ ಆ ರಿಸ್ಕ್ ತೆಗೆದುಕೊಳ್ಳಲೂ ಸಿದ್ಧವಿರಬೇಕಾಗುತ್ತದೆ. ಸೀರಿಯಲ್ ಬರಹಗಾರ ಚೌಕಟ್ಟಿನೊಳಗೆ ತನ್ನ ಸ್ವಾತಂತ್ರ್ಯವನ್ನು ತಾನೇ ಪಡೆದುಕೊಳ್ಳಬೇಕು. ತೀರ್ಮಾನವನ್ನು ತುಂಬ ಜವಾಬ್ದಾರಿಯಿಂದ ಮಾಡಬೇಕಾಗುತ್ತದೆ. ಏಕೆಂದರೆ ಟೀವಿ ವೀಕ್ಷಕರ ಮನಸ್ಥಿತಿ ಸಿನಿಮಾ ವಿಕ್ಷಕರ ಮನಸ್ಥಿತಿಗಿಂತ ಭಿನ್ನ ಎನ್ನುವುದು ನನ್ನ ತಿಳಿವಳಿಕೆ. ಸಮಾಜಕ್ಕೆ ನಾವು ಒಳ್ಳೆಯದನ್ನು ಮಾಡಬೇಕೆ ಹೊರತು ಕೆಟ್ಟದ್ದಲ್ಲ. ಕಥೆಗೆ ಖಳನಾಯಕಿ ಬೇಕೇ ಬೇಕು. ಆಕೆಯ ಕೆಲಸ ಎಲ್ಲವೂ ಕೆಟ್ಟದ್ದೇ ಆಗಿರಬೇಕು. ಊಟದಲ್ಲಿ ವಿಷಬೆರೆಸಿ ನೀಡಬೇಕು ಎನ್ನುವ ಕಲ್ಪನೆಯೇ ಅವಾಸ್ತವ ಅಂತಹ ಸನ್ನಿವೇಶವನ್ನು ನಾನು ತರಲು ಇಷ್ಟಪಡುವುದೇ ಇಲ್ಲ. ವಿಲನ್ ಇಲ್ಲದೆ ಕಥೆ ನಡೆಸಿಕೊಂಡು ಹೋಗಬೇಕು ಎನ್ನುವುದು ನನ್ನ ತಿಳಿವಳಿಕೆ.

'ಇಂತಿ ನಿನ್ನ ಆಶಾ'ದಲ್ಲಿ ನಾಯಕನಿಗೆ ಮದುವೆ ಆಗಿದ್ದರೂ ಒಬ್ಬ ಪ್ರೇಯಸಿ ಇದ್ದಾಳೆ. ಆ ಪ್ರೇಯಸಿಗೆ ತನ್ನ ಸ್ಥಾನ ಎರಡನೇಯದು ಎಂದು ಗೊತ್ತಿದೆ ಅದೇ ವಾಸ್ತವ. ಮಾತ್ರ ಅಲ್ಲ, ಎಂದೂ ತನ್ನ ಪ್ರಿಯತಮನ ಹೆಂಡತಿಗೆ ಕೇಡುಬಗೆಯಲು ಇಷ್ಟಪಡುವುದಿಲ್ಲ. ಅವಳಿಗೆ ಅನುಮಾನ ಬರಬಾರದು ಎಂದು ಒಳ್ಳೆಯವಳಂತೆ ವರ್ತಿಸುತ್ತಾಳೆ. ಇಲ್ಲಿ ನಾಯಕನ ಹೆಂಡತಿಗೆ (ಆಶಾ) ಮೊಬೈಲ್ ಪ್ರೇಮ ಹೆಚ್ಚು. ನಾಯಕನಿಗೆ ಅವಳ ಕಂಡರೆ ಸಿಡಿಮಿಡಿಯಾಗುತ್ತಾನೆ. ಒಮ್ಮೆ ಅವಳ ಮೊಬೈಲ್ ಒಡೆದು ಹಾಕುತ್ತಾನೆ. ಅದನ್ನು ತಿಳಿದ ಅವನ ಪ್ರೇಯಸಿ (ಮೋನಿಕಾ) ಹೊಸ ಮೊಬೈಲ್ ತಂದುಕೊಟ್ಟು ಅದನ್ನು ಒಪ್ಪದಿಂದ ಮುಚ್ಚಿ 'ಮುದ್ದು ಮಡದಿಗೆ ಪ್ರೀತಿಯ ಉಡುಗೊರೆ' ಎಂದು ಬರೆದು ಅದನ್ನು ಕೊಡಲು ಪ್ರೇರೆಪಿಸುತ್ತಾಳೆ. ನಂತರ ಆಶಾ ಮೊಬೈಲ್ ಬಿಟ್ಟು ತನ್ನ ಗಂಡನ ಉಡುಗೊರೆಯ ಬರಹವನ್ನೇ ಮೋಹಿಸುತ್ತಾಳೆ. ವಿವಾಹೇತರ ಸಂಬಂಧ ಎಲ್ಲ ಕಾಲದಲ್ಲೂ ಇರುತ್ತವೆ ಅವು ಯಾವುದೋ ಅಗತ್ಯ ಕಾರಣಗಳಿಂದ ಬೆಸೆದುಕೊಂಡಿರುತ್ತವೆ. ಯಾವ ತಪ್ಪಿತಸ್ಥ ಆಲೋಚನೆ ಇಲ್ಲದೆ ಬೆಸೆದ ಸಂಬಂಧಗಳು ಉದ್ದೇಶಪೂರ್ವಕವಾಗಿ ಹಾನಿಯನ್ನು ಉಂಟುಮಾಡುವುದಿಲ್ಲ.

◆ **ನಾನೂ ಬರೆಯಬೇಕು ಎನ್ನುವವರಿಗೆ ಏನು ಸಲಹೆ ಕೊಡ್ತೀರಿ?**

ತುಂಬ ಜನರಿಗೆ ಸಲಹೆ ನೀಡಿದ್ದೇನೆ. ಒಂದೇ ಸೀನಿನ ಸ್ಕ್ರೀನ್ ಪ್ಲೇ ಮತ್ತು ಡೈಲಾಗ್ ಕೊಡುತ್ತೇನೆ. ನಾನು ಬರವಣಿಗೆ ಆರಂಭಿಸಿದಾಗ ಕೆಲವರ ಬರಹ ಪಡೆದುಕೊಂಡಿದ್ದೆ, ಅದನ್ನೂ ಕೊಡುತ್ತೇನೆ. ಡೈಲಾಗ್‌ಗಳು ಪ್ರಾಸಕ್ಕಿಂತ ಆಕರ್ಷಣೀಯವಾಗಿರಬೇಕು. ಮತ್ತೆ ಎಂದೂ ರಿಪೀಟ್ ಆಗದಂತೆ ತಾಜಾತನದಿಂದ ಇರುವಂತೆ ನೋಡಿಕೊಳ್ಳಬೇಕು. ನಾನು ಕಣ್ಣು ಮುಚ್ಚಿಕೊಂಡು ಪಾತ್ರಗಳನ್ನು ಎದುರಿಗೆ ತಂದುಕೊಂಡು ಗಟ್ಟಿಯಾಗಿ ಹೇಳುತ್ತಾ ರೆಕಾರ್ಡ್ ಮಾಡಿಕೊಳ್ಳುತ್ತೇನೆ. ನಂತರ ಅದನ್ನು ಕೇಳಿಸಿಕೊಂಡು ಬರೀತೀನಿ. ಸನ್ನಿವೇಶಗಳನ್ನು ಜನರಿಗೆ ಹತ್ತಿರವಾಗುವಂತೆ ತರಲು ಇಷ್ಟಪಡುತ್ತೇನೆ. ಕಥೆಗಳು ನೂರಾರು ಕಾದಂಬರಿ ಓದುವುದರಿಂದಲೋ ಇಲ್ಲವೇ ಸಿನಿಮಾ ನೋಡುವುದರಿಂದಲೋ ಹುಟ್ಟುವುದಿಲ್ಲ. ಅದು ಜನಸಾಮಾನ್ಯರ ಬದುಕಿನಲ್ಲಿ ಅಡಗಿರುತ್ತದೆ. ಅದನ್ನು ಅರಿತು ಬರೆದರೆ ಕಥೆಯಲ್ಲಿ ಜೀವಂತಿಕೆ ಇರುತ್ತದೆ. ನಾನು ಅದನ್ನೇ ಮಾಡುವುದು. ಸಾಮಾನ್ಯ ಕುಟುಂಬದಲ್ಲಿ ಹುಟ್ಟಿಬೆಳೆದ ನನಗೆ ಜನರ ಬದುಕನ್ನು ನೋಡುವುದು ಇಷ್ಟ.

■ **ರಾಘವೇಂದ್ರ ಕೆ.**